ಸಿ.ಆರ್.ಎಂ.ಸಿ.ನಂ:129/2024
ಪಿ.ಡಬ್ಲ್ಯೂ: 1

ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ ದಂಡಾಧಿಕಾರಿಯವರ ನ್ಯಾಯಾಲಯ, ಪೊನ್ನಂಪೇಟೆ
ಸಿ.ಆರ್.ಎಂ.ಸಿ.ನಂ:**129/2024**

**ದಿನಾಂಕಃ 16.12.2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

ಮುಂದುವರಿದ ಪಾಟೀಸವಾಲು : ಎದುರುದಾರರ ಪರ ಶ್ರೀ ಕೆ ಪಿ ಪಿ ವಕೀಲರಿಂದಃ

1. ನಾನು ಗಂಡನ ಮನೆಯಲ್ಲಿ ವಾಸ ಮಾಡಿಕೊಂಡು ಇದ್ದೇನೆ ಎಂದರೆ ಸರಿ. ಒಟ್ಟಿಗೆ ಊಟ ಮಾಡಿಕೊಂಡು ವಾಸವಾಗಿದ್ದೆ ಎಂದರೆ ಸರಿ. ಸಾಕ್ಷಿಯ ಮುಂದುವರಿದು ನಾನು ಅಲ್ಲಿ ಕೆಲಸ ಮಾಡಿಕೊಂಡು ಇದ್ದ ಕಾರಣ ಮಾತ್ರ ನನಗೆ 3 ಹೊತ್ತು ಊಟವನ್ನು ಕೊಡುತ್ತಿದ್ದಾರೆ ಎಂದು ನುಡಿಯುತ್ತಾರೆ. ನಾನು ಬೆಳಿಗ್ಗೆ 6.00 ರಿಂದ 6.15 ಕ್ಕೆ ಎದ್ದೇಳುತ್ತೇನೆ. ನನ್ನ ಅತ್ತೆ ಬೆಳಿಗ್ಗೆ 5.00 ಗಂಟೆಗೆ ಎದ್ದು ಅಡುಗೆ ಕೆಲಸ ಮಾಡುತ್ತಾರೆ ನಾನು ಯಾವುದೇ ಅಡುಗೆ ಕೆಲಸ ಮಾಡುದಿಲ್ಲ ಎಂದರೆ ಸರಿಯಲ್ಲ. ನಾನು ಅಡುಗೆ ಕೆಲಸ ಮಾಡುತ್ತೇನೆ ಮತ್ತು ಹಸುಗಳಿಗೆ ಗಂಜಿ ಕಾಯಿಸಿ ಕೊಟ್ಟಿಗೆಗೆ ಹೋಗಿ ಕೊಡುತ್ತೇನೆ. ನಾನು ಎಲ್ಲಾ ಮನೆ ಕೆಲಸಗಳನ್ನು ಮಾಡುತ್ತೇನೆ. ಮನೆ ಕಸಗುಡಿಸಲು ಕೆಲಸಗಾರರು ಇದ್ದಾರೆ. ಕೆಲಸಗಾರರು ಬಂದಿಲ್ಲ ಸಮಯದಲ್ಲಿ ನಾನು ಕಸವನ್ನು ಗುಡುಸುವುದು ಮತ್ತು ಮನೆಯನ್ನು ಒರಸಕೊಳ್ಳುವುದನ್ನು ಕೆಲಸ ಮಾಡುತ್ತೇನೆ. ನಾನು ಮನೆಯ ಎಲ್ಲಾ ಕೆಲಸವನ್ನು ಮಾಡುತ್ತೇನೆ. ನಾನು 7.00 ಗಂಟೆಗೆ ದಿನಾಲು ಎದ್ದು ಅತ್ತೆ ಅಡುಗೆ ಮಾಡಿದ ಅಡುಗೆಯನ್ನು ಊಟಮಾಡಿಕೊಂಡು ವಿಲಾಸಿ ಜೀವನ ನಡೆಸುತ್ತಿದ್ದನೆ ಎಂದರೆ ಸರಿಯಲ್ಲ. ನಾನು ಯಾವುದೇ ಮನೆ ಕೆಲಸ ಮಾಡುತ್ತಿಲ್ಲಾ ಎಂದರೆ ಸರಿಯಲ್ಲ. ನಾನು ನಿನ್ನೆ ಮತ್ತು ಇವತ್ತು ನನ್ನ ಅಮ್ಮನ ಮನೆಗೆ ಹೋಗಿರುತ್ತೇನೆ.

2. ನಾನು ತೋಟದ ಕೆಲಸಕ್ಕೆ ಹೋಗಿರುವುದಿಲ್ಲ. ನಾನು ಗದ್ದೆಯಲ್ಲಿ ಸಹ ಕೆಲಸಕ್ಕೆ ಹೋಗಿರುವುದಿಲ್ಲ. ನನಗೆ ಪ್ರತಿವಾದಿಗಳ ಸೇರಿದ ಜಮೀನಿನ ಚೆಕ್ಕುಬಂದಿ ಗೊತ್ತಿಲ್ಲ. ನನ್ನ ಮದುವೆ ಆದ ನಂತರ ನನ್ನ ತಾಯಿಗೆ ಬೆಂಗಳೂರಿನಲ್ಲಿ ಶಸ್ತ್ರ ಚಿಕಿತ್ಸೆ ಆಗಿದೆ ಎಂದರೆ ಸರಿ. ಆಗ ನಾನು ನನ್ನ ತಾಯಿಯ ಜೊತೆ ಆಸ್ಪತ್ರೆಯಲ್ಲಿ 1 ವಾರ ಇದ್ದೆ. ಆ ಸಮಯದಲ್ಲಿ 1ನೇ ಎದುರುದಾರರು ನನ್ನ ತಾಯಿಗೆ ನೋಡಲು ಬಂದಿರುತ್ತಾರೆ ಎಂದರೆ ಸರಿ. ನನ್ನ ಮದುವೆ ಆದ ನಂತರ ನನ್ನ ಬಳಿ ಮೊಬೈಲ್ ಇತ್ತು ಎಂದರೆ ಸರಿ.

3. ನಾನು ಬೆಂಗಳೂರಿನಲ್ಲಿ 2008 ರಿಂದ 2010 ತನಕ ಹೆಚ್ ಡಿ ಎಫ ಸಿ ಬ್ಯಾಂಕ್‌ನಲ್ಲಿ ಕೆಲಸ ಮಾಡುತ್ತಿದ್ದೆ. ಆ ಸಮಯದಲ್ಲಿ ನನಗೆ ಮಾಸಿಕ 10,000/- ರೂಪಾಯಿ ಸಂಬಳ ಇತ್ತು. ನನಗೆ ಆ ಸಮಯದಲ್ಲಿ ಸುಮಾರು ಸ್ನೇಹಿತರು ಇದ್ದರು ಎಂದರೆ ಸಾಕ್ಷಿಯು ಸ್ವಲ್ಪ ಜನ ಇದ್ದರು ಎನ್ನುತ್ತಾರೆ. ಆ ಸಮಯದಲ್ಲಿ ಕಿರನ್ ಕುಮಾರ್ ಎನ್ನುವವರ ಪರಿಚಯ ಇತ್ತು ಎಂದರೆ ಸರಿ. ಸಾಕ್ಷಿ ಮುಂದುವರಿದು ನಾನು ಅವರ ಮನೆಯಲ್ಲಿ ಬಾಡಿಗಿಗೆ ವಾಸವಿದ್ದೆ, ಅದನ್ನು ಬಿಟ್ಟು ಅವರು ನನಗೆ ಪರಿಚಯ ಇಲ್ಲ ಎನ್ನುತ್ತಾರೆ. ಕಿರನ್ ಕುಮಾರ ಎನ್ನುವವರು ನನ್ನ ಜೊತೆ ತುಂಬಾ ಅನ್ಯೂನವಾಗಿ ಇದ್ದರು ಎಂದರೆ ಸರಿಯಲ್ಲ. ಮೊದಲನೇ ಎದುರುದಾರರು ನನ್ನ ತಾಯಿ ಆಸ್ಪತ್ರೆಯಲ್ಲಿ ಇದ್ದಾಗ ನೋಡಲು ಬಂದ ಸಮಯದಲ್ಲಿ ಕಿರನ್ ಕುಮಾರ ಅಲ್ಲಿ ಇದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಕಿರನ್ ಕುಮಾರ ನನಗೆ ದೂರವಾಣಿ ಕರೆ ಮಾಡಿ ಆಸ್ಪತ್ರೆಗೆ ಬಂದಿದ್ದರು ಸಹ ನನಗೆ ಗೊತ್ತಿಲ್ಲ ಎಂದು ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಕಿರನ್ ಕುಮಾರ ರವರಿಗೆ ದೂರವಾಣಿ ಕರೆಯನ್ನು ಮಾಡುವುದು ಮತ್ತು ಅವರು ನನಗೆ ದೂರವಾಣಿ ಕರೆಯನ್ನು ಮಾಡುವುದು ನಡೆಯುತ್ತಿತ್ತು ಎಂದರೆ ಸರಿಯಲ್ಲ. 2011 ಮತ್ತು 2012 ರ ನನ್ನ ಮೊಬೈಲ್‌ಗೆ ಸಂಬಂಧಪಟ್ಟ ಕಾಲ್ ಹಿಸ್ಟರಿ ಎನ್ನು ಎದುರುದಾರರು ನ್ಯಾಯಾಲಯಕ್ಕೆ ತಂದು ಹಾಜರು ಪಡಿಸಲು ನನ್ನದು ಯಾವುದೇ ಅಭ್ಯಂತರ ಇಲ್ಲ ಎಂದರೆ ಸಾಕ್ಷಿಯು ಇಲ್ಲ ಎನ್ನುತ್ತಾರೆ. 2011-2012 ರಲ್ಲಿ ಉಪಯೋಗಿಸಿದ ಸಿಂ ಸಂಖ್ಯೆ ನನಗೆ ನೆನಪಿಲ್ಲ. ಈ ಬಗ್ಗೆ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀನೆ ಎಂದರೆ ಸರಿಯಲ್ಲ. ನನ್ನ ಮದುವೆ ಆದ ನಂತರವು ಸಹ ಕಿರನ್ ಕುಮಾರನಿಗೆ ನಾನು ದೂರವಾಣಿ ಕರೆ ಮಾಡುತಿದ್ದು ಅವರ ಜೊತೆ ಸ್ನೇಹ ಇಟ್ಟುಕೊಂಡಿದ್ದೆ ಎಂದರೆ ಸರಿಯಲ್ಲ.

4. ನಾನು ಮನೆಯಲ್ಲಿ ಕೆಲಸವನ್ನು ಮಾಡದೆ ಇದ್ದು, ಮೊಬೈಲ್ನಲ್ಲಿ ಮಗ್ನವಿದ್ದು ಕಿರಿನ್ ಕುಮಾರ್ ಜೊತೆ ಮಾತನಾಡುತ್ತಿದ್ದೆ ಎಂದರೆ ಸರಿಯಲ್ಲ. ಈ ಬಗ್ಗೆ 1 ನೇ ಎದುರುದಾರರು ನನಗೆ ಪ್ರಶ್ನೆ ಮಾಡಿದಾಗ ನಾನು ಅವರ ಜೊತೆ ಜಗಳಾಡಿದ್ದೆ ಎಂದರೆ ಸಾಕ್ಷಿಯು ಜಗಳವಾಗಿಲ್ಲ ಮಾತುಕತೆ ಆಯಿತು ಎನ್ನುತ್ತಾರೆ. ಕಿರಿನ್ ಕುಮಾರ್ ವಿಚಾರಕ್ಕೆ ನನಗೆ 1 ನೇ ಎದುರುದಾರರು ಪ್ರಶ್ನೆ ಮಾಡಿದರೆ ನಾನು ಆತ್ಮಹತ್ಯೆ ಮಾಡಿಕೊಳ್ಳುತೇನೆ ಎಂದು 1 ನೇ ಎದುರುದಾರರಿಗೆ ಬೆದರಿಕೆ ಹಾಕುತ್ತಿದ್ದೆ ಎಂದರೆ ಸರಿಯಲ್ಲ.

5. 2012 ರಲ್ಲಿ ನನ್ನ ಮೊದಲನೇ ಮಗುವಿಗೆ ನಾನು ಮತ್ತು 2 ನೇ ಎದುರುದಾರರು ನೋಡಿಕೊಳ್ಳುತಿದ್ದವು. ನಾನು ಆ ಸಮಯದಲ್ಲಿ ಸಹ ಮೊಬೈಲ್ನಲ್ಲಿ ಕಾಲ ಕಳೆಯುತ್ತಿದ್ದೆ, ಮಗುವನ್ನು ಎದುರುದಾರರು ಮತ್ತು ನನ್ನ ಅತ್ತೆ ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ನನ್ನ ಮಗುವಿನ ವಿದ್ಯಾಭ್ಯಾಸ ನಾನೇ ತೆಗೆದುಕೊಂಡಿರುತ್ತೇನೆ. ನನ್ನ ಇಬ್ಬರು ಮಕ್ಕಳು ಮೊದಲನಿಂದಲು ಗೋಣಿಕೊಪ್ಪದ ಲೈನ್ಸ್ ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾರೆ ಎಂದರೆ ಸರಿ. ನಾನು ಮಕ್ಕಳ ವಿದ್ಯಾಭ್ಯಾಸವನ್ನು ನೋಡಿಕೊಳ್ಳುತ್ತಿಲ್ಲ ಎಂದರೆ ಸರಿಯಲ್ಲ. 1 ನೇ ಎದುರುದಾರರು ಒತ್ತಾಯ ಮಾಡಿ ಮಕ್ಕಳ ವಿದ್ಯಾಭ್ಯಾಸ ನೋಡಿಕೊಳ್ಳು ಎಂದು ನನಗೆ ಹೇಳುತ್ತಿದ್ದರು ಎಂದರೆ ಸರಿಯಲ್ಲ. ಆ ಕಾರಣದಿಂದ ನಾನು ಮಕ್ಕಳಿಗೆ ವಿನಾಕಾರಣ ಹೊಡೆಯುತ್ತಿದ್ದೆ ಎಂದರೆ ಸರಿಯಲ್ಲ. ವರ್ಷಕೊಮ್ಮೆ ಮಕ್ಕಳಿಗೆ ವಾರ್ಷಿಕ ದಿನಚಾರಣೆ ನಡೆಯುತ್ತಿತ್ತು ಎಂದರೆ ಸರಿ. ನಾನು ಸದರಿ ದಿನಚಾರಣೆಯನ್ನು ಆಚರಣೆ ಮಾಡಲು ಒಬ್ಬಳೆ ಬಸ್ಸಿನಲ್ಲಿ ಹೋಗುತ್ತಿದ್ದೆ. ನಾನು parents meeting ಕ್ಕೆ ಹೋಗಿರುತ್ತೇನೆ. ನಾನು ಯಾವುದೇ meeting ಹೋಗೆ ಇಲ್ಲ, 1 ನೇ ಎದುರುದಾರರು ಹೋಗುತ್ತಿದ್ದರು ಎಂದರೆ ಸರಿಯಲ್ಲ. ನಿಪಿ-17 ರಿಂದ 20 ಕ್ಕೆ ನಾನು ಮನೆಯಲ್ಲಿ ಸಹಿ ಹಾಕಿದ್ದೇನೆ ಎಂದರೆ ಸರಿ.

6. ಕಿರಿನ್ ಕುಮಾರ ರವರ ಜೊತೆ ನನಗೆ ಅಕ್ರಮ ಸಂಬಂಧ ಇದೆ ಎಂದು 1 ನೇ ಎದುರುದಾರರು ಸಂಶಯಪಟ್ಟು ನನ್ನ ಜೊತೆ ಜಗಳವಾಡುತ್ತಿದ್ದರು. ಅದೇರೀತಿ ನನ್ನ ಮೊಬೈಲ್ ಅನ್ನು ಕಿತ್ತುಕೊಳ್ಳುತ್ತಿದ್ದರು. ಕಿತ್ತುಕೊಂಡ ಮೊಬೈಲ್ ನನಗೆ 1 ನೇ ಎದುರುದಾರರು 1 ವರ್ಷ ಆದ ನಂತರ ನೀಡಿರುತ್ತಾರೆ. ನಂತರ ನನಗೆ ನನ್ನ ತಮ್ಮ ಬೇರೆ ಮೊಬೈಲನ್ನು ಕೊಟ್ಟಿರುತ್ತಾರೆ. ಸದರಿ 2 ನೇ ಮೊಬೈಲ್‌ನಿಂದ ನಾನು ಎಲ್ಲಾರ ಸಂಪರ್ಕದಲ್ಲಿ ಇದ್ದೆ ಎಂದರೆ ಸರಿ. ಸಾಕ್ಷಿಯು ಮುಂದುವರಿದು ನನ್ನ ಕುಟುಂಬದವರ ಜೊತೆ ಸಂಪರ್ಕದಲ್ಲಿ ಇದ್ದೆ ಎನ್ನುತ್ತಾರೆ. ನಾನು ಈ ಮೊಬೈಲನು ಬಳುಸುವವ ವಿಚಾರ ಎದುರುದಾರರು ಹಾಗೂ ನನ್ನ ಅತ್ತೆಗೆ ಗೊತ್ತಿರಲಿಲ್ಲ ಎಂದರೆ ಸರಿಯಲ್ಲ.

ನಾನು ಮೊಬೈಲನಲ್ಲಿ ಬಿಜಿ ಇದ್ದೆ ವಿಚಾರ 1 ನೇ ಎದುರುದಾರರು ನನ್ನ ಅಪ್ಪ ಅಮ್ಮನಿಗೆ ತಿಳಿಸಿರುತ್ತಾರೆ ಎಂದರೆ ಸರಿ. ಈ ಬಗ್ಗೆ ನನ್ನ ತಂದೆ ತಾಯಿ ನನಗೆ ಹಾಗೂ 1 ನೇ ಎದುರುದಾರರಿಗೆ ಬುದ್ದಿವಾದ ಹೇಳಿದಾರ ಎಂದರೆ ಸರಿ. ಎದುರುದಾರು ವಕೀಲರು ಮುಂದುವರಿದ ಪಾಟೀಸವಾಲಿಗೆ ಸಮಾಯವಕಾಶ ಕೋರಿದ್ದು , ನೀಡಲಾಯಿತು.

**ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

**ಓ.ಹೇ.ಕೇ.ಸ.ಇ**

Sd/xxx-

ಪ್ರದೀಪ ಪೋತದಾರ

ಸಿವಿಲ್ ನ್ಯಾಯಾಧೀಶರು ಮತ್ತು

ಪ್ರದನ್ಯಾದಂ.,ಪೊನ್ನಂಪೇಟೆ.